

# ಮೃಗರಾಜನ ನಿದ್ರಾಯಣ!



ಈ ಮೃಗರಾಜನ ಪಡೆ ಮರ ಏರಿ ನಿದ್ದೆ ಹೊಡೆಯುತ್ತಿರುವುದು ತಾಂಜಾನಿಯಾದ ಸಿರೆಂಗೇಟಿ ಎಂಬ ಪ್ರದೇಶದಲ್ಲಿ. ಆಸ್ಟ್ರೇಲಿಯಾದ ಖ್ಯಾತ ವನ್ಯಜೀವಿ ಛಾಯಾಗ್ರಾಹಕ ಬಾಬಿ ಜೊ ಕ್ಲೊವ್ ಈ ದೃಶ್ಯಾವಳಿಗಳನ್ನು ಸೆರೆಹಿಡಿದಿದ್ದಾರೆ.

ಒಂದು ಮರದಲ್ಲಿ ಸುಮಾರು 15ಕ್ಕೂ ಹೆಚ್ಚು ಸಿಂಹಗಳು ಹತ್ತಿ ನಿದ್ರಿಸುತ್ತಿದ್ದವು. ಸಾಮಾನ್ಯವಾಗಿ ಸಿಂಹಗಳಿಗೆ ಮರ ಹತ್ತುವ ಸಾಮರ್ಥ್ಯ ಇರುವುದಿಲ್ಲ. ಆದರೆ ತಾಂಜಾನಿಯಾದ ಈ ಸಿಂಹಗಳು ಅನಾಯಾಸವಾಗಿ ಮರವೇರಿ ಕಣ್ಣು ತುಂಬ ನಿದ್ರಿಸುವುದನ್ನು ನೋಡಿದರೆ ಅಚ್ಚರಿಯಾಗುತ್ತದೆ. ಮರದ ರೆಂಬೆಗಳನ್ನೇ ಆಸರೆಯಾಗಿಸಿ ಈ ಸಿಂಹಗಳು ಗೊರಕೆ ಹೊಡೆಯುತ್ತವೆ.

‘ಈ ಸಿಂಹಗಳು ಇರುವ ಪ್ರದೇಶಗಳಲ್ಲಿ ಕೀಟಗಳ ಕಾಟ ಹೆಚ್ಚು. ಈ ಕೀಟಗಳು ಸಿಂಹಗಳಿಗೆ ನಿದ್ರಾಭಂಗ ಮಾಡುತ್ತವೆ. ಅದಕ್ಕಾಗಿ ಸಿಂಹಗಳು ಸುಮಾರು 20 ಅಡಿ ಎತ್ತರದ ಮರವೇರಿ ನಿದ್ದೆ ಮಾಡುತ್ತವೆ’ ಎನ್ನುತ್ತಾರೆ ಬಾಬಿ ಜೊ ಕ್ಲೊವ್.

■ **ಅವನೀಶ್**